



## ಆಹಾ ಮಾಂಗ್‌ಟೀಕಾ (ಬೈತಲೆ ಬೊಟ್ಟು)

ಮಾಂಗ್‌ಟೀಕಾ ಈಗ ಮದುವೆ ಹೆಣ್ಣಿಗೆ ಮಾತ್ರ ಸೀಮಿತವಲ್ಲ. ಫ್ಯಾಷನ್ ಬಯಸುವ ಎಲ್ಲ ಮಹಿಳೆಯರು ತೊಡುತ್ತಿದ್ದಾರೆ. ಭರತನಾಟ್ಯದಲ್ಲೂ ಕಲಾವಿದೆಯರು ಮಾಂಗ್ಟೀಕಾ ಧರಿಸುವುದು ಇದೆ. ಮುಂಗುರುಳಿನ ಎರಡೂ ಕಡೆ ಬೈತಲೆ ಬೊಟ್ಟಿನಂತೆ ಧರಿಸುತ್ತಿದ್ದ ಮಾಂಗ್ಟೀಕಾವನ್ನು ಈಗ ಒಂದೇ ಬದಿಗೂ ತೊಟ್ಟುಕೊಳ್ಳಲಾಗುತ್ತದೆ. ಇದೇ ಕಾರಣಕ್ಕೆ ಅಸಿಮ್ಮೆಟ್ರಿಕಲ್ ಮಾಂಗ್ಟೀಕಾ ಮಾರುಕಟ್ಟೆಗೆ ಬಂದಿದೆ. ಜೊತೆಗೆ ಕ್ರಿಸ್ಟಲ್, ಗೋಲ್ಡ್ ಶೇಡ್, ಕುಂದನ್ ಮುಂತಾದ ವೈವಿಧ್ಯಗಳಲ್ಲಿ ಮಾಂಗ್ಟೀಕಾ ಲಭ್ಯ. ಮದುವೆಗಳಲ್ಲಿ ಮದುಮಗಳ ಅಂದವನ್ನು ಹೆಚ್ಚಿಸುವ ಪರ್ಲ್, ಬೀಡ್ಸ್, ಕ್ರಿಸ್ಟಲ್‌ನ ಹಣೆಯ ಸಿಂಗಾರವನ್ನು ಹೆಚ್ಚಿಸುವ 'ಮಾತಾ ಪಟ್ಟಿ' ಮಾಂಗ್ಟೀಕಾ ಹೆಚ್ಚು ಟ್ರೆಂಡಿಯಾಗಿದೆ.

ಪಾರಂಪರಿಕ ಆಭರಣವೂ ಫ್ಯಾಷನ್‌ನ ಹಾದಿ ಹಿಡಿದಿದೆ. ಮನಮೋಹಕವಾದ ಇಂಥ ಒಡವೆ ಆಭರಣ ಫ್ಯಾಷನ್ ಆಗಿ ಬಂದ ಲಾಗಾಯ್ತಿನಿಂದಲೂ ಚಿನ್ನದ ಜತೆಗೆ ಅತ್ಯಾಕರ್ಷಕ ಕುಂದನ್, ಮಿನಾಕರಿ, ಟೆಂಪಲ್ ಜ್ಯುವೆಲ್ಲರಿ, ಇಟಾಲಿಯನ್ ಆಭರಣ, ಮುತ್ತು, ರೂಬಿ, ಹರಳು, ಪಚ್ಚೆ, ಹವಳಗಳು ತಳುಕು ಹಾಕಿಕೊಂಡು ಮತ್ತಷ್ಟು ಆಕರ್ಷಕವಾಗಿ ಗ್ರಾಹಕರನ್ನು ತಲುಪಿಸಲು ಆಭರಣ ಮಳಿಗೆಗಳು ಮುಂದಾಗಿವೆ. ಇದರ ಜತೆಗೆ ಪ್ರಾಚೀನ ಆಭರಣಗಳು, ವಧುವಿನ ಅಲಂಕಾರ ಸಂಗ್ರಹ, ನಿಜಾಮರ ಕಾಲದ ಒಡವೆಗಳು, ಹಗುರವಾದ ಆಭರಣ, ಟು–ಇನ್–ವನ್ ಒಡವೆ ಸಂಗ್ರಹ, ವಿಕ್ಟೋರಿಯನ್ ಆಭರಣ... ಹೀಗೆ ಆಭರಣಗಳ ಸಂಗ್ರಹ ಫ್ಯಾಷನ್ ಜಗತ್ತಿನಲ್ಲಿ ರಾಯಭಾರ ನಡೆಸುತ್ತಿದೆ.

ಎಥ್ನಿಕ್ ಆಭರಣ, ಆಮ್ರಪಾಲಿ ಒಡವೆ, ಸಿಂಪಲ್ ಆಗಿರುವ ಆ್ಯಂಟಿಕ್ ಒಡವೆಗಳು ಕೂಡ ಮಹಿಳೆಯರಿಗೆ ಆಯ್ಕೆಯನ್ನು ಒದಗಿಸಿ ಮನಗೆಲ್ಲುತ್ತಿವೆ. ಹೀಗೆ ಫ್ಯಾಷನ್ ಪ್ರಪಂಚದಲ್ಲಿ ಒಡವೆಗಳು ಮಹಿಳೆಯರ ಕಣ್ಣು ಕೋರೈಸಿ ತಮ್ಮ ತಿಜೋರಿಯಲ್ಲಿ ಸೇರಿಸಿಕೊಳ್ಳುವ ಬಯಕೆ ಹುಟ್ಟಿಸುತ್ತಿವೆ.

ನರ್ತನ ಮಾಡುವ ಚಂದವೇ ವರ್ಣಿಸಲಸದಳ. ಆ್ಯಕ್ಸೆಸರೀಸ್‌ನಲ್ಲಿ ಕ್ಲಿಪ್, ಹೇರ್ ಬ್ಯಾಂಡ್ ಎಲ್ಲವೂ ಚಂದವೇ. ಪುಟಾಣಿಗಳಂತೂ ಕಾಮನಬಿಲ್ಲಿನ ಬಣ್ಣದ ಬೊಂಬೆ ಹಿಡಿದು ಮುದ್ದು ಮಾಡುವುದರಲ್ಲೇ ತಲ್ಲೀನ. ಬಣ್ಣದ ಹೇರ್ ಕ್ಲಿಪ್, ಬ್ಯಾಂಡ್, ಫ್ರಾಕ್ ಧರಿಸಿದ ಪೋರಿಯರು ನಗುನಗುತ್ತಾ ಖುಷಿಪಡುವುದು ನೋಡುವುದೇ ಚಂದ.

### ಎವರ್‌ಗ್ರೀನ್ ಚೋಕರ್

ನೆಕ್ಲೇಸ್ ಒಂದಿದ್ದರೆ ಕುತ್ತಿಗೆಗೆ ಬೇರೆ ಯಾವ ಒಡವೆಯೂ ಬೇಡ. ಇದೇ ರೀತಿ ಕತ್ತನ್ನು ಬಿಗಿದಪ್ಪುವ ಚೋಕರ್ ಎವರ್‌ಗ್ರೀನ್ ಫ್ಯಾಷನ್ ಎನಿಸಿದೆ. ಎಲ್ಲ ಉಡುಪಿಗೂ ಮ್ಯಾಚ್ ಮಾಡಿಕೊಳ್ಳುವಂಥ ರೈನ್‌ಬೊ ಚೋಕರ್ ಫ್ಯಾಷನಬಲ್ ಆಗಿರುತ್ತದೆ. ಕಾಮನಬಿಲ್ಲು ಚೋಕರ್‌ನಲ್ಲಿ ವಿಭಿನ್ನ ವಿನ್ಯಾಸದವು ಲಭ್ಯ. ಕಾಮನಬಿಲ್ಲಿನ ಎಲ್ಲ ಬಣ್ಣಗಳ ಜೊತೆಗೆ ಇನ್ನಷ್ಟು ಅಪರೂಪದ ವರ್ಣ ಸಂಯೋಜನೆಯ ಚೋಕರ್‌ಗಳು ಸಖತ್ ಲುಕ್ ಕೊಡುತ್ತವೆ. ಬಂಗಾರದಲ್ಲಿ ಮಾಡಿರುವ ಚೋಕರ್‌ಗೆ ಮುತ್ತು, ಹರಳು, ಮಣಿಗಳನ್ನು ಅಳವಡಿಸಿ ಮಾಡಿದರೆ ಇನ್ನೂ ಗಮನಸೆಳೆಯುತ್ತದೆ.

### ಬೀಡ್ಸ್ ಚೆಲುವು

ಉಡುಪಿಗೆ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲು ಬಣ್ಣ ಬಣ್ಣದ ಬೀಡ್ಸ್ ಇರುವ ಒಡವೆ ಸಹಕಾರಿ. ಅನೇಕ ಮಹಿಳೆಯರು ಬಣ್ಣ ಬಣ್ಣ ಬೀಡ್ಸ್ ಹಾಕಿರುವ ಒಡವೆಗೇ ಆದ್ಯತೆ ನೀಡುತ್ತಾರೆ. ಹೀಗಾಗಿ ಬೀಡ್ಸ್‌ಗಳಲ್ಲಿ ಹಲವಾರು ಶೇಪ್, ಬಣ್ಣ, ವೈವಿಧ್ಯಗಳಿದ್ದು ಹೆಂಗಳೆಯರ ಮನಸೆಳೆಯುತ್ತಿದೆ. ಎಮರಾಲ್ಡ್, ರೂಬಿ ಬೆಲೆಬಾಳುವ ನವರತ್ನ. ಹಲವಾರು ಬೀಡ್ಸ್, ಓವಲ್ ಶೇಪ್, ಪಿಯರ್ ಶೇಪ್, ರೌಂಡ್ ಶೇಪ್‌ಗಳಲ್ಲಿ ಬರುತ್ತದೆ. ಒಂದೊಂದು ಶೇಪ್‌ನ ಬೀಡ್ಸ್‌ಗಳನ್ನು ಅಳವಡಿಸಿದಾಗಲೂ ಅದು ಒಂದೊಂದು ತರಹದ ನೋಟವನ್ನು ಬೀರುತ್ತದೆ. ಈ ಚೋಕರ್‌ಗಳನ್ನು ತೋಳ್ಬಂಧಿಯಾಗಿಯೂ ಬಳಸ ಬಹುದು.



### ವರ್ಣಸಂಯೋಜನೆ; ಪ್ರತಿಫಲನ

ಕಾಮನಬಿಲ್ಲಿನ ವರ್ಣಸಂಯೋಜನೆಯ ಉಂಗುರಗಳಲ್ಲಿ ವಿವಿಧ ಬಣ್ಣದ ಹರಳುಗಳು ಇದ್ದು ನೋಡಲು ಅತ್ಯಾಕರ್ಷಕ. ಈ ಹರಳುಗಳು ಬೆಳಕಿನ ಪ್ರತಿಫಲನದಂತೆ ಮಿಂಚುತ್ತವೆ, ಬಣ್ಣ ಬಣ್ಣದ ಮಣಿಗಳ ಹಾರಗಳು, ಬಳೆಗಳು, ಕಿವಿಯೋಲೆಗಳು ಕೂಡ ಆಭರಣ ಪ್ರಪಂಚದಲ್ಲಿ ಸಖತ್ ಆಗಿ ಸದ್ದು ಮಾಡುತ್ತಿವೆ.

ಕಾಮನಬಿಲ್ಲಿನಲ್ಲಿರುವ ಬಣ್ಣಗಳು ಧರಿಸುವವರ ಮನೋಧರ್ಮದ ಮೇಲೂ ಪ್ರಭಾವ ಬೀರುತ್ತವೆ ಎನ್ನುತ್ತದೆ ಬಣ್ಣ ವಿಜ್ಞಾನ (ಕಲರ್ ಸೈನ್ಸ್). ವರ್ಣ ತಜ್ಞರ ಪ್ರಕಾರ–

ಕೆಂಪು ಬಣ್ಣದ ಆಭರಣ ಉತ್ಸಾಹ, ಉಲ್ಲಾಸ ಹಾಗೂ ಶಕ್ತಿಯ ಗುಣಗಳನ್ನು ಅಭಿವ್ಯಕ್ತಿಸುತ್ತದೆ.

ಕಿತ್ತಳೆ ಬಣ್ಣವು ಸೃಜನಶೀಲತೆ, ಚಾಕಚಕ್ಯತೆ ಮತ್ತು ಉತ್ಸಾಹವನ್ನು ಪ್ರತಿನಿಧಿಸುತ್ತದೆ.

ಹಳದಿ ಬಣ್ಣವು ಜನರಿಗೆ ಆಶಾದಾಯಕ ಮನೋಭಾವ ಮತ್ತು ಸಂತೋಷವನ್ನು ಪ್ರತಿನಿಧಿಸುತ್ತದೆ.

ಹಸಿರು ಬಣ್ಣ ಸಮೃದ್ಧಿ ಹಾಗೂ ಶಾಂತಿಯ ಸಂಕೇತವಾಗಿದ್ದು, ಸಮನ್ವಯತೆ ಸಾರುತ್ತದೆ.

ನೀಲಿ ಬಣ್ಣ ಶಾಂತಿ ಮತ್ತು ವಿಶ್ವಾಸವನ್ನು ಸೂಚಿಸುತ್ತದೆ.

ನೇರಳೆ ಬಣ್ಣವು ಬೆಳಕಿನ ತರಂಗಾಂತರದ ವರ್ಣವಾಗಿದ್ದು, ಶಾಂತಿಯ ಭಾವನೆಯನ್ನು ಬಿಂಬಿಸುತ್ತದೆ,

ಊದಾ ಬಣ್ಣವು ಕೆಂಪು, ನೀಲಿ, ಸ್ವಲ್ಪ ಕಪ್ಪು ಅಥವಾ ಬಿಳುಪಿನೊಡನೆ ಸಂಯೋಜಿತವಾಗಿರುವ ಬಣ್ಣವಾಗಿದ್ದು, ಸೌಹಾರ್ದದ ಪ್ರತೀಕ ಎಂದೂ ಬಿಂಬಿತವಾಗಿದೆ.

ಕಾಮನಬಿಲ್ಲಿನ ಆಭರಣಗಳು ಸಕಾರಾತ್ಮಕ ಯೋಚನೆಗೆ ಸಹಕಾರಿಯಾಗಿದೆ ಎನ್ನುವುದು ಫ್ಯಾಷನ್ ತಜ್ಞರ ಅಭಿಮತ. ಎಲ್ಲವೂ ಸ್ವಾಭಾವಿಕ ವರ್ಣ ಸಂಯೋಜನೆಯಾಗಿದ್ದು, ಉಡುಗೆಯಿರಲಿ, ಒಡವೆಯಿರಲಿ, ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲು ಅನುಕೂಲಕರವಾಗಿದೆ. ■